ಅವಳ ಮುಖದಲ್ಲಿ ಒಂದು ವಿಶೇಷ ಕಾಂತಿಯಿದ್ದು, ಅಲ್ಲಿ ಮುಗುಳ್ನಗೆ ಅರಳಿದೆ. ಆ ವಾತಾವರಣ ಅದೆಷ್ಟು ಸುಂದರವಾಗಿರಬಹುದು!

ಸಾಹಸ ಅನೇಕ ರೂಪಗಳಲ್ಲಿವೆ. ಆ ರಾಜಬಾಲಿಕೆ ರಫ್ ಟಫ್ ಸಮುದ್ರ ಹಡಗಿನ ಕ್ಯಾಪ್ಟನ್ ಬಗ್ಗೆ ಆಕರ್ಷಿತಳಾದಳು, ಅವನನ್ನು ಪ್ರೀತಿಸುವ ಧೈರ್ಯ ತೋರಿದಳು. ಅವನೊಂದಿಗೆ ಅವನ ಕ್ಲಿಪರ್‌ನಲ್ಲಿ ಕೂತು ತನ್ನ ಉಪಮಹಾದ್ವೀಪ ಭಾರತಕ್ಕೆ 'ಟಾಟಾ' ಹೇಳಿ ಅವನ ಸ್ಕಾಟ್ಲೆಂಡ್ ದ್ವೀಪಕ್ಕೆ ಸದಾ ಕಾಲಕ್ಕೂ ಹೊರಟು ಹೋದಳು. ನನ್ನ ಮುತ್ತಜ್ಜ ಮುತ್ತಜ್ಜಿ ಅದೆಷ್ಟು ಸಾಹಸಿಗಳಾಗಿದ್ದರು! ಈ ಬಗ್ಗೆ ಯೋಚಿಸಿದಾಗ ಆಶ್ಚರ್ಯವಾಗುತ್ತದೆ.

ನಾನು ಕೋಲಾಬಾ, ಪರೇಲ್, ವರ್ಲಿ, ಮಾಹಿಮ್, ದಾದರ್, ಬಾಂದ್ರಾ ಎಲ್ಲವನ್ನು ಅಡ್ಡಾಡಿದೆ. ನೀನಾಳೊಂದಿಗೆ ಮಾರ್ಗಗಳ ಮಧ್ಯದಲ್ಲಿ ಅನೇಕ ಸ್ವಾರಸ್ಯಕರ ದಾರಿಹೋಕರೊಂದಿಗೆ ಮಾತನಾಡುತ್ತಾ, ಬಟಾಟ ವಡಾ ಮತ್ತು ಪಾವ್‌ಬಾಜಿ ಸವಿಯುತ್ತಾ ಹೋಗುತ್ತಿದ್ದೆ. ಸಮುದ್ರದ ಮಡಿಲಿನಲ್ಲಿ ಮಲಗಿದ್ದ ಈ ಮಹಾನಗರ 1853ರಲ್ಲಿ, ನನ್ನ ಮುತ್ತಜ್ಜಿಯ ಕಾಲದಲ್ಲಿ ಹೇಗಿರಬಹುದು...! ಯೋಚಿಸಿ ಆಶ್ಚರ್ಯಪಡುತ್ತಿದ್ದೆ. ನೀನಾ ನನ್ನ ಆಶ್ಚರ್ಯವನ್ನು ನೋಡಿ ನಗುತ್ತಿದ್ದಳು.

ನಾನು ರೈಲಿನಲ್ಲಿ ಜನರಲ್ ಬೋಗಿಯಲ್ಲಿ ಸಹ ಪ್ರಯಾಣ ಮಾಡಿದೆ. ಯಾತ್ರಿಕರ ಸಂಖ್ಯೆಯನ್ನು ನೋಡಿ ದಂಗಾದೆ. ಬಾಂದ್ರಾದಿಂದ ಚರ್ಚ್ ಗೇಟಿನವರೆಗಿನ ಪ್ರಯಾಣದಲ್ಲಿ ನನ್ನ ಬೆವರು ಹರಿದು ಬಂತು. ಗೇಟ್‌ವೆ ಆಫ್ ಇಂಡಿಯಾ ನನಗೆ ವೈಭವೋಪೇತ ವಿಮಾನ ನಿಲ್ದಾಣವೆಂದು ಕಂಡಿತು. ಅಲ್ಲಿಯ ಓರ್ವ ಹೂವು ಮಾರುವವಳಲ್ಲಿ ಸುವಾಸನೆಯ ಪುಷ್ಪಗಳನ್ನು ಕೊಂಡು ಅದನ್ನು ನೀನಾಳ ಜಡೆಗೆ ಮುಡಿಸಿದೆ. ನಂತರ ಅವಳ ಕೈಯನ್ನು ಹಿಡಿದು, ಚೌಳುಪ್ಪಿನ ನೀರಿಗಿಳಿದೆ. ನನ್ನ ಮುತ್ತಜ್ಜ ಸಹ ನನ್ನ ಮುತ್ತಜ್ಜಿಯೊಂದಿಗೆ ಇದೇ ಸಾಗರದಲ್ಲಿರಬೇಕು. ಸಮುದ್ರದ ನೀರು ನೀರಾಗಿರುವುದಿಲ್ಲ, ಅನೇಕ ಜಲಧಾರೆಗಳೊಂದಿಗೆ ಜಲವನ್ನು ಸ್ವೀಕರಿಸಿ ಒಂದು ವ್ಯಕ್ತಿತ್ವವಾಗುತ್ತದೆ; ಅದು ಸಾವಿರಾರು ವರ್ಷಗಳಿಂದ ತನ್ನ ಪ್ರವಾಹದಲ್ಲಿ ಜೀವನವನ್ನು ನಿರೂಪಿಸುತ್ತಾ, ಆಲೋಕಗೊಳಿಸುತ್ತಾ ಬಂದಿದೆ. ಇಂದು ನಾನಿಲ್ಲಿಗೆ ಆ ಇತಿಹಾಸವನ್ನು ಪುನರುಚ್ಚಿಸಲು ಹಾಗೂ ಅದಕ್ಕೊಂದು ಹೊಸ ಆಯಾಮವನ್ನು ಕೊಡಲು ಬಂದಿದ್ದೆ.

'ನಾನು ನಿನ್ನನ್ನು ಪಡೆದದ್ದು ನನ್ನ ಅದೃಷ್ಟವಾಗಿದೆ' ಎಂದು ನೀನಾಗೆ ಹೇಳಿದೆ.

ದೇವರು ಓರ್ವ ದೊಡ್ಡ ಡಿಸೈನರ್ ಆಗಿದ್ದಾನೆ. ಅಮೇನ್...! ನೀನಾ, ಪ್ರಭು ಕ್ರಿಸ್ತನ ಅನುಗ್ರಹ ಸದಾ ನಿನ್ನ ಆತ್ಮದೊಂದಿಗಿರಲಿ...!

ವೈವಾಹಿಕ ಜೀವನ

ನನ್ನ ಮತ್ತು ನೀನಾಳ ನಡುವೆ ಅನೇಕ ಸಮಾನತೆಗಳಿದ್ದರೂ, ವಾಸ್ತವಿಕತೆ ಎಂದರೆ ನಾನು ಸ್ಕಾಟಿಷ್‌ನವನಾಗಿದ್ದು, ಅವಳು ಇಂಡಿಯನ್ ಆಗಿದ್ದಳು. ವಿಭಿನ್ನ ಸಂಪ್ರದಾಯದವರು ವಿವಾಹವಾದಾಗ ಅವರ ವೈಯಕ್ತಿಕ ಸಂಬಂಧವಷ್ಟೇ ಅಲ್ಲ, ಅವರ ಪರಿವಾರದ ದೃಷ್ಟಿಕೋನ ಮತ್ತು ಅವರ ಅಕ್ಕಪಕ್ಕದ ಸಮಾಜದ ದೃಷ್ಟಿಕೋನವೂ ಪ್ರಭಾವಕ್ಕೊಳಪಡುತ್ತದೆ. ಸಾಮಾನ್ಯವಾಗಿ ಹನಿಮೂನ್ ಹಂತದವರೆಗೆ ಎಲ್ಲವೂ ಉಚಿತವಾಗಿ ನಡೆಯುತ್ತದೆ. ಆದರೆ ಹನಿಮೂನ್ ಹಂತ ಮುಗಿದಾಗ, ಜೀವನ ವಾಸ್ತವಿಕ ನೆಲೆಗಟ್ಟಿನ ಮೇಲೆ ವಾಸ್ತವಿಕ ದೃಷ್ಟಿಯಿಂದ ಆರಂಭವಾಗುತ್ತದೆ. ಆಗ ಜೋಡಿಗಳಿಗೆ ತಮ್ಮ ಪಾರಸ್ಪರಿಕ ಅಭಿಪ್ರಾಯ ಭೇದಗಳು ಮತ್ತು ಭಿನ್ನತೆಗಳ ಆಭಾಸವಾಗುತ್ತದೆ. ಒಂದು ವೇಳೆ ಅವರು ಒಬ್ಬರು ಮತ್ತೊಬ್ಬರನ್ನು ಸ್ವೀಕರಿಸುವಲ್ಲಿ ಸಮರ್ಥರಾದರೆ ಸರಿಯೇ, ಇಲ್ಲದಿದ್ದಲ್ಲಿ ಸಂಘರ್ಷ ಮತ್ತು ಸಮಸ್ಯೆಗಳ ಮುಖ ತೆರೆಯಲ್ಪಡುತ್ತವೆ.

ನಾವು ಹೋದಲ್ಲೆಲ್ಲಾ ಜನ ನಮ್ಮನ್ನು ದುರುಗುಟ್ಟಿ ನೋಡುತ್ತಿದ್ದರು. ಬಿಳಿ ಯೂರೋಪಿಯನ್ ಪುರುಷನೊಬ್ಬ ಶ್ಯಾಮ ವರ್ಣದ ಮಹಿಳೆಯೊಂದಿಗೆ ಹೋಗುವಾಗ, ಒಂದು ವಿಚಿತ್ರ ಜೋಡಿಯನ್ನಾಗಿಸುತ್ತದೆ. ಆ ಜೋಡಿಗಳು ಅನೇಕರ ಗಮನವನ್ನು ಸೆಳೆಯುತ್ತಾರೆ. ಭಾರತದ ಯಾತ್ರೆ ಕೈಗೊಂಡಾಗ ನಮಗೆ ಇದು ಹೆಚ್ಚು ಅನುಭವಕ್ಕೆ ಬಂತು. ಏಕೆಂದರೆ ಭಾರತದ ಜನ ಹೆಚ್ಚು ಕುತೂಹಲಿಗಳು. ನಾವು ಹೋದಲ್ಲೆಲ್ಲಾ ಜನ, ನೀನಾ ನನ್ನ ಅನುವಾದಕಿ ಎಂದು ತಿಳಿಯುತ್ತಿದ್ದರು. ಅವಳು ನನ್ನ ಪತ್ನಿ ಎಂದು ತಿಳಿದಾಗ ಅವರಿಗೆ ಆಶ್ಚರ್ಯವಾಗುತ್ತಿತ್ತು; ಇದು ನೀನಾಳನ್ನು ಹೆಚ್ಚು ಘಾತಕಗೊಳಿಸುತ್ತಿತ್ತು.

ಆದರೂ ನಾವು ಸಾಧ್ಯವಾದಷ್ಟೂ ಜೊತೆಯಾಗಿರುತ್ತಿದ್ದೆವು. ನಾನು ನೀನಾಳೊಂದಿಗೆ ಅವಳ ಭಾರತದ ಮಿತ್ರರುಗಳ ಮನೆಗೆ ಹೋದೆ. ಅವಳ ಭಾರತೀಯ ಸಮುದಾಯದವರ ಕಾರ್ಯಕ್ರಮಗಳಲ್ಲೂ ಭಾಗವಹಿಸಿದೆ. ಅವಳು ಹೆಚ್ಚೇನೂ ಧಾರ್ಮಿಕ ಸ್ವಭಾವದವಳಾಗಿರಲಿಲ್ಲ. ಆದರೆ ಅವಳು ನನಗೆ ಮಠ ಮಂದಿರಗಳಿಗೆ ಹೋಗಲು ಪ್ರಸ್ತಾವಿಸಿದಾಗ ನಾನು ಹೋಗುತ್ತಿದ್ದೆ. ಅವಳು ಸಹ ನನ್ನೊಂದಿಗೆ ಕ್ರೈಸ್ತ ಸಂಘಟನೆಗಳಿಗೆ ಬರುತ್ತಿದ್ದಳು. ನನ್ನೊಂದಿಗೆ ಚರ್ಚಿನ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದಳು. ಡಿಸೆಂಬರ್ 31ರಂದು ಹೊಸ ವರ್ಷದ ಸಂತಸವನ್ನು ಆಚರಿಸುವ ವಿಶಿಷ್ಟ 'ಸ್ಕಾಟ್ಸ್ ಹೋಗ್ಮನೆ' ಉತ್ಸವದಲ್ಲಿ ಅವಳು ನನ್ನೊಂದಿಗೆ ನಿಷ್ಠೆಯಿಂದ ಭಾಗವಹಿಸುತ್ತಿದ್ದಳು. ಅವಳು ನನ್ನ ಸ್ಕಾಟಿಷ್ ಮಿತ್ರರೊಂದಿಗೆ ಗೆಳೆತನವನ್ನು ಬೆಳೆಸಿದಳು.

ನೀನಾ ವ್ಯವಹಾರ ಕುಶಲ ಮಹಿಳೆಯಾಗಿದ್ದಳು. ಅವಳು ನನ್ನ ಮನೆಯ ಸೊಸೆಯಾಗಲು ಶಕ್ತಿ ಮೀರಿ ಪ್ರಯತ್ನಿಸಿದಳು. ನನ್ನ ಪರಿವಾರದ ಸದಸ್ಯರೊಂದಿಗೆ ಆತ್ಮೀಯತೆಯನ್ನು ಹೆಚ್ಚಿಸಿಕೊಂಡಳು. ವಿಶೇಷವಾಗಿ ನನ್ನ ಸಹೋದರಿ ಮತ್ತು ಪುತ್ರಿಯರೊಂದಿಗೆ ಹೆಚ್ಚು ಕಲೆತಳು. ನನ್ನೊಂದಿಗೆ ಸ್ಕಾಟ್ಲೆಂಡಿಗೆ ಹೋಗಲು ಸದಾ ಸಿದ್ಧಳಾಗಿರುತ್ತಿದ್ದಳು. ಅಲ್ಲಿ ನನ್ನ ಸಹೋದರಿ, ಪುತ್ರಿಯರು ಮತ್ತು ತಂದೆ ತಾಯಿಯೊಂದಿಗೆ ಆತ್ಮೀಯತೆಯಿಂದ ವರ್ತಿಸುತ್ತಿದ್ದಳು. ಜೂಲಿಯಾಳನ್ನು ಕೋಪನ್‌ಹೇಗನ್ನಿಗೂ ಆಹ್ವಾನಿಸಿದಳು. ನೀನಾ ತನ್ನ ಮನೆಯ ಬಾಗಿಲನ್ನು ನನ್ನ ಪುತ್ರಿಯರಿಗೆ ಸದಾ ತೆರೆದಿದ್ದಳು. ಅವಳ ಈ ಧೈರ್ಯ ನನ್ನ ಮೇಲೆ ಹೆಚ್ಚು ಪರಿಣಾಮವನ್ನು ಬೀರಿತು; ಲೂಸಿ ಮತ್ತು ಗ್ರೇಸಿ ಕೋಪನ್‌ಹೇಗನ್ನಿಗೆ ಬಂದಾಗ ಹೆಚ್ಚು ಉತ್ಸಾಹದಿಂದಿರುತ್ತಿದ್ದಳು. ತುಂಬಾ ಅಸಕ್ತಿಯಿಂದ ಅವರಿಗೆ ನಗರದ ದರ್ಶನ ಮಾಡಿಸುತ್ತಿದ್ದಳು. ಅವರನ್ನು ನನ್ನ ಅಪ್ಸರೆಯರೆಂದು ಕರೆಯುತ್ತಿದ್ದಳು.

## ಕಳೆದ ಸಂಚಿಕೆಯಲ್ಲಿ



ನೀನಾಳ ಆಗಮನದೊಂದಿಗೆ ಪಾಲ್ ಮನೆಯ ಕ್ರಿಸ್‌ಮಸ್ ಆಚರಣೆಗೆ ಹೊಸ ಕಳೆ ತುಂಬಿಕೊಂಡಿತು. ಪಾಲ್‌ನಲ್ಲಿ ರಮ್ಯ ಕನಸುಗಳು ಮೊಳೆಯತೊಡಗಿದವು. ಪ್ರೇಮದ ಕಾರಣದಿಂದಾಗಿ ಸ್ಥಳಾಂತರಗೊಂಡ ಪಾಲ್‌ಗೆ ಡೆನ್ಮಾರ್ಕ್‌ನ ಇಂಟರ್‌ನ್ಯಾಷನಲ್ ಶಾಲೆಯೊಂದರಲ್ಲಿ ಅಧ್ಯಾಪಕನ ಕೆಲಸ ದೊರೆಯಿತು. ಅಲ್ಲಿ ಸ್ಕಾಟಿಷ್ ಡಾನ್ಸ್ ಗ್ರೂಪ್‌ನ ಸಂಪರ್ಕವೂ ದೊರೆಯಿತು. ಪಾಲ್‌ನ ಮದುವೆಯ ಪ್ರಸ್ತಾಪವನ್ನು ನೀನಾ ಖುಷಿಯಿಂದ ಒಪ್ಪಿಕೊಂಡಳು. ಸೂಕ್ತ ಸಂಗಾತಿಯ ಹುಡುಕಾಟದಲ್ಲಿದ್ದ ಪಾಲ್‌ಗೆ ನೀನಾಳ ಸಾಂಗತ್ಯ ತನ್ನ ಹುಡುಕಾಟದ ಕೊನೆ ಎನ್ನಿಸಿತು. ಮದುವೆಯ ಸಿದ್ಧತೆಗಳು ಭರದಿಂದ ನಡೆದವು. ಮಕ್ಕಳಾದ ಕರೀನಾ, ಜೊಹಾನಾ, ಲೂಸಿ ಮತ್ತು ಗ್ರೇಸಿ ಒಟ್ಟಿಗೆ ಕೂಡಿ, ಬಾಲಿವುಡ್ ಹಾಡೊಂದಕ್ಕೆ ನೃತ್ಯ ಸಂಯೋಜಿಸಿ ತಮ್ಮ ಪೋಷಕರ ಮದುವೆಗೆ ರಂಗು ತುಂಬಿದರು. ಮತ್ತೆ ಮದುವೆಯ ಸಂಭ್ರಮಕ್ಕೆ ತಮ್ಮನ್ನೊಡ್ಡಿಕೊಂಡ ಜೋಡಿ ಮಧುಚಂದ್ರಕ್ಕಾಗಿ ಭಾರತಕ್ಕೆ ಹೋಗಲು ನಿಶ್ಚಯಿಸಿಯಾಗಿತ್ತು. ಹೀಗೆ, ನೆನಪುಗಳ ದಾರಿಯಲ್ಲಿ ನಡೆಯತೊಡಗಿದ ಪಾಲ್‌ಗೆ ದಾರಿಯ ಆಯಾಸ ತ್ರಾಸದಾಯಕವೆನ್ನಿಸಲಿಲ್ಲ. ದಾರಿಯಲ್ಲಿ ಎದುರಾದವರು ಪಾಲ್‌ನಲ್ಲಿ 'ಪ್ರೇಮದ ಯಾತ್ರಿಕ'ನೊಬ್ಬನನ್ನು ಕಂಡರು.